**ದಿನಾಂಕಃ 22-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ.ವಿ.ಬಿ.ಎಂ. ವಕೀಲರಿಂದಃ**

1. ನಾನು ನಿವೃತ ಶಿಕ್ಷಕನಾಗಿರುತ್ತಾನೆ. ನಾನು ಬ.ಬಾಗೇವಾಡಿಯಲ್ಲಿ ವಾಸವಾಗಿರುತ್ತೇನೆ. ನನ್ನ ಜಮೀನಿನ ಸರ್ವೆ ನಂ.296 ಆಗಿರುತ್ತದೆ. ಸರ್ವೆ ನಂ.295 ರ ಮಾಲೀಕರ ಮೇಲೆ ದಾವೆ ಸಲ್ಲಿಸಿರುತ್ತೇನೆ. ಸರ್ವೆ ನಂ.295 ಎಷ್ಟು ಎಕರೆ ಎಷ್ಟು ಗುಂಟೆ ಇರುತ್ತದೆ ಎಂದು ನೆನಪಿಲ್ಲ. ಸರ್ವೆ ನಂ.295 ರ ಚಕಬಂದಿ ಹೇಳಲು ಬರುವುದಿಲ್ಲ. ಸರ್ವೆ ನಂ.296 ರ ಚಕಬಂದಿ ಉತ್ತರಕ್ಕೆ ನನ್ನ ಅಣ್ಣನ ಜಮೀನು, ಪಶ್ಚಿಮಕ್ಕೆ ಗುರುಲಿಂಗಪ್ಪ ಬ್ಯಾಕೋಡ ರವರ ಜಮೀನು, ದಕ್ಷಿಣಕ್ಕೆ ಮಹಾಂತಪ್ಪ ಮಾಳುರವರ ಜಮೀನು ಇರುತ್ತದೆ. ಸರ್ವೆ ನಂ.296 ರಲ್ಲಿ 3 ಭಾಗಗಳು ಆಗಿರುತ್ತವೆ. ಸದರಿ 3 ಪಟ್ಟಿಗಳ ಕ್ಷೇತ್ರ ಎಷ್ಟು ಇರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂ.295 ರಲ್ಲಿ ಎಷ್ಟು ಹಿಸ್ಸಾಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ.

2. ಸರ್ವೆ ನಂ.295 ಮತ್ತು 296 ರ ಎಷ್ಟು ಕ್ಷೇತ್ರಗಳ ಉತಾರೆಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು 296 ರಲ್ಲಿ 5 ಎಕರೆ 36 ಗುಂಟೆ ಇರುತ್ತದೆ. ಜಮೀನು ಸರ್ವೆ ಮಾಡಿಸಿ 3 ವರ್ಷಗಳು ಆಗಿರುತ್ತವೆ. ಸರ್ವೆ ನಂ.295 ರಲ್ಲಿ 3 ಹಿಸ್ಸಾಗಳು ಆಗಿರುತ್ತವೆ ಎಂದರೆ ಸರಿ. 3 ಹಿಸ್ಸಾಗಳ ಮಾಲೀಕರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸರ್ವೆ ಮಾಡಿಸಬೇಕಾದರೆ ಎಷ್ಟು ಹಿಸ್ಸಾ ಆಗಿರುತ್ತವೆ ಎಲ್ಲವನ್ನು ಅಳತೆ ಮಾಡಬೇಕಾಗುತ್ತದೆ ಎಂದರೆ ಸರಿ. ಎಲ್ಲಾ ಹಿಸ್ಸಾಗಳನ್ನು ಅಳತೆ ಮಾಡಿ ವರದಿ ಸಲ್ಲಿಸಬೇಕಾಗುತ್ತದೆ ಎಂದರೆ ಸರಿ. ಎಲ್ಲ ಜಮೀನುಗಳನ್ನು ಅಳತೆ ಮಾಡಿದಾಗ ಯಾವ ಜಮೀನಿನಲ್ಲಿ ಎಷ್ಟು ಜಮೀನು ಒತ್ತವರಿಯಾಗಿರುತ್ತದೆ ಎಂದು ಕಂಡುಬರುತ್ತದೆ ಎಂದರೆ ಸರಿ. ಸರ್ವೇಯರ 3 ಹಿಸ್ಸಾಗಳ ಅಳತೆ ಮಾಡಿಲ್ಲ ಎಂದರೆ ಸರಿ.

3. ನನ್ನ ಜಮೀನನ್ನು ಅಳತೆ ಮಾಡಬೇಕಾದರೆ 3 ಹಿಸ್ಸಾದವರಿಗೆ ನೋಟಿಸ್ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಜಮೀನಿಗೆ ಹೋಗಿಲ್ಲ, ನನಗೆ ಚಕಬಂದಿ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ

ಜಮೀನು ಒತ್ತುವರಿಯಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಮೀನಿನ ದಕ್ಷಿಣ ಭಾಗದಲ್ಲಿ 9 ಗುಂಟೆ ಅತೀಕ್ರಮಣವಾಗಿರುತ್ತದೆ. ನನ್ನ ಜಮೀನು ಅತೀಕ್ರಮಣವಾಗಿರುತ್ತದೆ ಎಂದು ಕಬ್ಜಾ ಕೊಡಿಸಬೇಕೆಂದು ನ್ಯಾಯಾಲಯಕ್ಕೆ ಹೊರತುಪಡಿಸಿ ಬೇರೆ ಕಡೆ ಅರ್ಜಿ ಸಲ್ಲಿಸಿರುವುದಿಲ್ಲ. ನನ್ನ ಜಮೀನು ಅತೀಕ್ರಮಣವಾಗದಿದ್ದರು ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.296 ರಲ್ಲಿ 3 ಪಟ್ಟಿಗಳು ಇದ್ದು, ಅವುಗಳನ್ನು ಅಳತೆ ಮಾಡದೆ ಅತೀಕ್ರಮಣಣ ಮಾಡಿದ ಬಗ್ಗೆ ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ.

4. ಪ್ರತಿವಾದಿಯರು ತಮ್ಮ ಜಮೀನು ಮತ್ತು ನಮ್ಮ 3 ಪಟ್ಟಿಗಳನ್ನು ಅಳತೆ ಮಾಡಿ ಎಂದು ತಿಳಿಸಿದರು ಸಹ ನಾವು ಅವರ ಮಾತಿಗೆ ಬೆಲೆಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ನಮ್ಮ ಜಮೀನನ್ನು ಅತೀಕ್ರಮಣ ಪ್ರವೇಶ ಮಾಡಿರುತ್ತಾರೆ ಎಂದು ಖೊಟ್ಟಿ ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನನ್ನು ಯಾವಾಗ ಅಳತೆ ಮಾಡಿರುತ್ತೇನೆ ಮತ್ತು ಯಾವಾಗ ಅರ್ಜಿ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

5. ನನ್ನ ವಾದ ಪತ್ರದಲ್ಲಿ ಹಾಜರುಪಡಿಸಿದ ನಕಾಶೆ ಯಾರು ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವೆಯ ಬಗ್ಗೆ ನಮ್ಮ ವಕೀಲರಿಗೆ ನಾನು ಹೇಳಿದ ಹಾಗೆ ಬರೆಸಿರುತ್ತಾರೆ. ದಾವೆ ಜೊತೆ ಹಾಜರುಪಡಿಸಿದ ದಾಖಲಾತಿಯ ಬಗ್ಗೆ ಗೊತ್ತಿರುತ್ತದೆ. ಪ್ರತಿವಾದಿ ಹಾಜರುಪಡಿಸಿದ ತಕರಾರಿನ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ನಮ್ಮ ಜಮೀನಿನಲ್ಲಿ ಒತ್ತುವರಿ ಮಾಡಿಲ್ಲ, ಪ್ರತಿವಾದಿ ಹಾಗೂ ನನಗೂ ಮನಸಾ ಮನಸಾ ಸರಿಯಿಲ್ಲ ಕಾರಣ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

6. ಪ್ರತಿವಾದಿಯ ಅಣ್ಣ-ತಮ್ಮಂದಿರು ಮತ್ತು ನನ್ನ ಅಣ್ಣ-ತಮ್ಮಂದಿರನ್ನು ಯಾವ ಕಾರಣಕ್ಕಾಗಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ನನ್ನ ಜಮೀನಿಗೆ ನಾನು ಮಾಲೀಕನು ಆಗಿರುವ ಕಾರಣ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ

ಸದರಿಯವರನ್ನು ಪಕ್ಷಗಾರರನ್ನಾಗಿ ಮಾಡದೆ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**